ಅ) ಮತ್ತು ಆ) } ಆ ಜಮೀನುಗಳು ನಿಗಧಿತ ಸೂತ್ರಗಳಿಗನುಸಾರವಾಗಿದ್ದಲ್ಲಿ ಅನ್ವಯಿಸಲಾಗುವುದು.

ಆಳಂದ್ ತಾಲ್ಲೂಕಿನ ಪ್ರಾಥಮಿಕ ಶಾಲ ಶಿಕ್ಷಕರ ಖಾಲಿ ಹುದ್ದೆಗಳ ಬಗ್ಗೆ

೧೪೧೯ (೨೪೦೩) ಶ್ರೀ ಶರಣಬಸಪ್ಪ ಮೂಲಿ ಪಾಟೀಲ್ (ಆಳಂದ್).—ಮಾನ್ಯ ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಆಳಂದ್ ತಾಲ್ಲೂಕಿಗೆ ಮಂಜೂರಾದ ಪ್ರಾಥಮಿಕ ಶಿಕ್ಷಕರ ಹುದ್ದೆಗಳೆಷ್ಟು ? ಅವುಗಳಲ್ಲಿ ಹಾಲಿ ಇರುವ ಶಿಕ್ಷಕರೆಷ್ಟು ?

ಆ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ಹಾಗೂ ಒಬ್ಬ ಶಿಕ್ಷಕರಿಗೆ ನಿಗದಿ ಪಡಿಸಲಾದ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಇ) ಪ್ರಾಥಮಿಕ ಶಿಕ್ಷಣಕ್ಕೆ ಕಲಿಯಲು ಬರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ?

ಈ) ಒಬ್ಬರೇ ಶಿಕ್ಷಕರಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ ಎಷ್ಟು ?

ಶ್ರೀ ಬಿ. ಸೋಮಶೇಖರ್(ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).—

ಅ) ೬೧೬ ಮಂಜೂರಾಗಿರುವ ಹುದ್ದೆಗಳು. ೫೭೪ ಶಿಕ್ಷಕರಿರುತ್ತಾರೆ.

ಆ) ಖಾಲಿ ಹುದ್ದೆಗಳನ್ನು ಕೂಡಲೇ ಭರ್ತಿಮಾಡಲು ಜಿಲ್ಲಾ ಆಯ್ಕೆ ಸಮಿತಿಗೆ ನಿರ್ದೇಶನ ನೀಡಲಾಗಿದೆ. ಒಬ್ಬ ಶಿಕ್ಷಕರಿಗೆ ನಿಗದಿಪಡಿಸಲಾಗಿರುವ ವಿದ್ಯಾರ್ಥಿಗಳ ಸಂಖ್ಯೆ ೫೦.

ಇ) ಆಳಂದ ತಾಲ್ಲೂಕಿನಲ್ಲಿ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ. ೩೪,೭೦೦.

ಈ) ಆಳಂದ ತಾಲ್ಲೂಕಿನಲ್ಲಿ ಒಬ್ಬರೇ ಶಿಕ್ಷಕರಿರುವ ಏಕೋಪಾಧ್ಯಾಯ ಶಾಲೆಗಳ ಸಂಖ್ಯೆ.೬೧

ಆಮರ್ಜಾ ಎಡದಂಡೆ ಕಾಲುವೆ ವಿಭಾಗದ ಬಗ್ಗೆ

೧೪೧೦ (೨೪೦೯) ಶ್ರೀ ಶರಣಬಸಪ್ಪ ಮೂಲಿ ಪಾಟೀಲ್(ಆಳಂದ್).—ಮಾನ್ಯ ಕಂದಾಯ ಮತ್ತು ಯೋಜನೆ ಹಾಗೂ ಭಾರಿ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಆಮರ್ಜಾ ಎಡದಂಡೆ ಕಾಲುವೆ ವಿಭಾಗದ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನೀಯರ್ ರವರಮೇಲೆ ಕೆಲವು ಆರೋಪ ಇರುವುದು ನಿಜವೆ ?

ಆ) ಹಾಗಿದಲ್ಲಿ, ಅವರಮೇಲೆ ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನೆ ಭಾರಿ ಹಾಗೂ ಮಧ್ಯಮ ನೀರಾವರಿ ಸಚಿವರು).—

ಅ) ನಿಜ.

ಆ) ಆರೋಪಗಳ ತನಿಖೆಗಾಗಿ ಕರ್ನಾಟಕ ಲೋಕಯುಕ್ತ ಇವರಿಗೆ ಬರೆಯಲಾಗಿದೆ.

ಕೃಷಿ ನಿರ್ದೇಶಕರ ಕಛೇರಿ ಕಟ್ಟಿಡದ ಬಗ್ಗೆ

೧೪೧೧ (೧೭೧೦) ಶ್ರೀ ಜಿ. ಎಸ್. ಶಿವನಂಜಪ್ಪ (ಗುಬ್ಬಿ).—ಮಾನ್ಯ ಕೃಷಿಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ತುಮಕೂರು ಜಿಲ್ಲೆ ಗುಬ್ಬಿಯಲ್ಲಿ ಸಹಾಯಕ ಕೃಷಿ ನಿರ್ದೇಶಕರ ಆಧಿಕಾರಿಗಳ ಕಛೇರಿಗಾಗಿ ಹೊಸ ಕಟ್ಟಡವು ಮಂಜೂರಾಗಿರುವುದು ನಿಜವೇ ? ಅದರ ಅಂದಾಜು ಮೊತ್ತ ಎಷ್ಟು ?